ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಭಾರತದ ಸ್ವಾತಂತ್ರ್ಯ ಚಳವಳಿ

ಒಂದು ಪಕ್ಷಿನೋಟ



ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಭಾರತದ ಸ್ವಾತಂತ್ರ್ಯ ಚಳವಳಿ

ಒಂದು ಪಕ್ಷಿನೋಟ

ಡಾ॥ ಹೋ. ಶ್ರೀನಿವಾಸಯ್ಯ

ಕರ್ನಾಟಕ ವಾರ್ತೆ

ಭಾರತದ ಸ್ವಾತಂತ್ರ್ಯ ಚಳವಳಿ ; ಒಂದು ಪಕ್ಷಿನೋಟ

ಲೇಖಕರು : ಡಾ॥ ಹೋ. ಶ್ರೀನಿವಾಸಯ್ಯ

ಪುಟಗಳು : 32 + 4

ಪ್ರತಿಗಳು : 3,00,000

ಮೊದಲ ಮುದ್ರಣ : ಆಗಸ್ಟ್ 2016

ಪ್ರಕಾಶಕರು :
ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ವಾರ್ತಾ ಸೌಧ, ಬೆಂಗಳೂರು – 560 001
ದೂ : 080 2202 8001/02
ಇಮೇಲ್ : directorinformation.gov@gmail.com
www.karnatakavarthe.org

ಮುದ್ರಕರು :
ಲಾವಣ್ಯ ಮುದ್ರಾ
ನಂ.19, 15ನೇ ಕ್ರಾಸ್, ಬಿ.ಎಸ್.ಕೆ. 1ನೇ ಹಂತ
ವಿದ್ಯಾಪೀಠ ವೃತ್ತ, ಬೆಂಗಳೂರು – 560 050
ಮೊಬೈಲ್ : 98450 63381
ಇ–ಮೇಲ್ : info@thelavanya.com



ಆತ್ಮೀಯರೆ,

ಎಲ್ಲರಿಗೂ 70ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು.

ಭಾರತ ದೇಶ ಸ್ವತಂತ್ರಗೊಳ್ಳಲು ಗಾಂಧೀಜಿಯವರದ್ದು ಬಹಳ ಪ್ರಮುಖ ಪಾತ್ರ. ಅನೇಕ ಸ್ವಾತಂತ್ರ್ಯ ಸೇನಾನಿಗಳ ತ್ಯಾಗ ಬಲಿದಾನದಿಂದ ಭಾರತ ಸ್ವತಂತ್ರಗೊಂಡಿತು. ಆ ಎಲ್ಲಾ ಹಿರಿಯ ಚೇತನಗಳನ್ನು ಅಭಿಮಾನದಿಂದ ಸ್ಮರಿಸುತ್ತೇನೆ.

ಗಾಂಧಿ ಅವರು ಉತ್ತಮ ರಾಷ್ಟ್ರ ನಿರ್ಮಾಣಕ್ಕಾಗಿ ಹದಿನೆಂಟು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ನಮ್ಮ ಸರ್ಕಾರ ಇವುಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ. ಉತ್ತಮರಾಷ್ಟ್ರ ನಿರ್ಮಾಣದಲ್ಲಿ ಇವುಗಳ ಕೊಡುಗೆ ಗಮನಾರ್ಹ. ಗಾಂಧೀಜಿ ಅವರು ಕಂಡ ಕನಸ್ಸನ್ನು ನನಸು ಗೊಳಿಸಲಿ ನಮ್ಮ ಸರ್ಕಾರ ಶ್ರಮಿಸುತ್ತಿದೆ. ಕರ್ನಾಟಕದ ಸಮಸ್ತ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭ ಕಾಮನೆಗಳು.

ಜೈಹಿಂದ್, ಜೈಕರ್ನಾಟಕ

ಸಿದ್ದರಾಮಯ್ಯ
ಮುಖ್ಯಮಂತ್ರಿ

ದಿ. 12.8.2016
ಸ್ಥಳ : ಬೆಂಗಳೂರು.

ಲೇಖಕರ ಮಾತು

ನಮ್ಮ ಪ್ರಾಚೀನ ಭಾರತ ಒಂದು ಸ್ವಾತಂತ್ರ್ಯ ದೇಶವಾಗಿತ್ತು. ಜನರು ಸಂಪದ್ಭರಿತವಾಗಿ ಸುಖ - ಸಂತೋಷದಿಂದ ಬಾಳುತ್ತಿದ್ದರು. ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಸಂಪತ್ತನ್ನು ಲೂಟಿ ಮಾಡಿದರು. ವ್ಯಾಪಾರ ಬೆಳೆಸಿಕೊಂಡು ಐಶ್ವರ್ಯವನ್ನು ದೋಚಿ, ದೇಶವನ್ನೇ ಕೊಳ್ಳೆ ಹೊಡೆದರು. ಭಾರತದಲ್ಲಿ ಇದ್ದ ಆಂತರಿಕ ಕಲಹಗಳನ್ನು ಉಪಯೋಗಿಸಿಕೊಂಡು, ದೇಶವನ್ನು ಆಳಲು ಪ್ರಾರಂಭಿಸಿದರು. ಕೆಲವರು ಐಶ್ವರ್ಯ ಕೊಳ್ಳೆ ಹೊಡೆದು ಹೊರಟು ಹೋದರು. ಕೆಲವರು ಇಲ್ಲೇ ನಿಂತು ಆಡಳಿತ ಮಾಡಿ ತಮ್ಮ ದೇಶವನ್ನಾಗಿ ಮಾಡಿಕೊಂಡು ನೆಲೆಸಿದರು.

ಆದರೆ ಬ್ರಿಟಿಷರ ಸರ್ಕಾರ ಆಡಳಿತಕ್ಕಾಗಿ ಭಾರತಕ್ಕೆ ಬರಲಿಲ್ಲ. ಅಲ್ಲಿಯ ಒಂದು ಕಂಪನಿಯವರು ವ್ಯಾಪಾರಕ್ಕಾಗಿ ಬಂದರು. ನಮ್ಮಲ್ಲಿಯ ಒಳಜಗಳದಿಂದ ಒಬ್ಬರಿಗೊಬ್ಬರಲ್ಲಿ ದ್ವೇಷ ಬೆಳೆದು, ವ್ಯಾಪಾರಕ್ಕೆ ಬಂದವರು ಉಪಾಯದಿಂದ ತಮ್ಮ ಶತ್ರುಗಳನ್ನು ಸೋಲಿಸಿದರು. ಇದರ ಗುಟ್ಟನ್ನೇ ತಿಳಿದು ವ್ಯಾಪಾರಕ್ಕೆ ಬಂದವರು ಆಡಳಿತ ಮಾಡಲು ಸಹಾಯ ಮಾಡುವವರ ಹಾಗೆ ನಟಿಸಿ ಆಡಳಿತಗಾರರಾದರು. ದೇಶವನ್ನೇ ಆವರಿಸಿಕೊಂಡರು. ವ್ಯಾಪಾರಕ್ಕೆ ಒಳ್ಳೆಯ ವಾತಾವರಣವನ್ನು ಬೆಳೆಸಿಕೊಂಡರು.

ದೇಶದ ಐಶ್ವರ್ಯವನ್ನೇ ಲೂಟಿ ಮಾಡಿದ್ದಲ್ಲದೆ ಇದ್ದ ಕೈಗಾರಿಕೆಗಳನ್ನು ಮತ್ತು ಸಂಸ್ಕೃತಿಯನ್ನು ನಾಶ ಮಾಡಿ, ಅವರ ಸಂಸ್ಕೃತಿಯನ್ನೇ ಬೆಳೆಸಿ ಆರ್ಥಿಕವಾಗಿ ಗುಲಾಮರನ್ನಲ್ಲದೆ ಸಾಂಸ್ಕೃತಿಕವಾಗಿ ಗುಲಾಮರನ್ನಾಗಿ ಮಾಡಿದರು.

ಇಂಗ್ಲೆಂಡಿನ ಲಾರ್ಡ್ ಮೆಕಾಲೆ 1835 ರಲ್ಲಿ ಅವರ ಪಾರ್ಲಿಮೆಂಟಿನಲ್ಲಿ ಕೊಟ್ಟ ಭಾಷಣದಿಂದ ಭಾರತ ಎಷ್ಟು ಸಂಪದ್ಭರಿತವಾಗಿದ್ದ ದೇಶವೆಂದು ತಿಳಿಯುತ್ತದೆ. "ನಾನು ಭಾರತದೇಶದ ಉದ್ದ ಅಗಲಕ್ಕೆ ಎಲ್ಲ ಕಡೆ ತಿರುಗಾಡಿದ್ದೇನೆ. ಆದರೆ ನಾನು ಆ ದೇಶದಲ್ಲಿ ಒಬ್ಬ ಭಿಕ್ಷುಕನನ್ನಾಗಲೀ, ಕಳ್ಳನನ್ನಾಗಲೀ ಕಾಣಲಿಲ್ಲ. ಆ ದೇಶ ಐಶ್ವರ್ಯದಿಂದ ತುಂಬಿದೆ. ನೀತಿವಂತ ಜನ ಬುದ್ಧಿವಂತರು, ಜ್ಞಾನವಂತರು ಆಗಿದ್ದಾರೆ.'

ಇವರ ಭಾಷಣದಿಂದ ಭಾರತ ದೇಶ 1835 ರಲ್ಲೂ ಹೇಗಿತ್ತು ಎಂದು ತಿಳಿಯುತ್ತದೆ. ಆದರೆ ಇಲ್ಲಿಗೆ ವ್ಯಾಪಾರಕ್ಕಾಗಿ ಬಂದವರು ನಮ್ಮ ದೇಶದ ಐಶ್ವರ್ಯವನ್ನೇ ಕೊಳ್ಳೆ ಹೊಡೆದರು. ನಮ್ಮನ್ನೇ ಗುಲಾಮರನ್ನಾಗಿ ಮಾಡಿದರು.

ಗಾಂಧೀಜಿಯವರು ಆಫ್ರಿಕಾದಿಂದ ಭಾರತಕ್ಕೆ ಬಂದಾಗ ದೇಶವನ್ನೆಲ್ಲಾ ಸುತ್ತಿ ಏನು ಮಾಡಿದರೆ ಹಾಗೂ ಯಾವ ಮಾರ್ಗದಲ್ಲಿ ನಡೆದು ಹೋದರೆ ಭಾರತಕ್ಕೆ ಸ್ವಾತಂತ್ರ್ಯ ಬರುತ್ತದೆ ಎಂದು ಯೋಚಿಸಿ, ಸತ್ಯ, ಅಹಿಂಸೆಗಳಿಂದ ಕೂಡಿರುವ ಚಳವಳಿಗಳನ್ನು ಯೋಜಿಸಿ ದೇಶದ ಎಲ್ಲಾ ಜನರು ಭಾಗವಹಿಸುವಂತೆ ಮಾಡಿದರು. ಬೇರೆ ದೇಶಗಳಲ್ಲಿ ಸಂಬಳದ ಆಧಾರದ ಮೇಲೆ ನೇಮಕವಾಗುವ ಸೈನಿಕರು ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದರೆ ಭಾರತದಲ್ಲಿ ಜನಸಾಮಾನ್ಯರು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸೈನಿಕರಾದರು. ಪಟ್ಟಣಿಗರು; ಬಡವರು, ಐಶ್ವರ್ಯವಂತರು, ಯುವಕರು, ವಯಸ್ಸಾದವರು ಎಲ್ಲರೂ ಭಾಗವಹಿಸುವ ರೀತಿಯಲ್ಲಿ ಗಾಂಧೀಜಿ ಅವರು ಚಳವಳಿಗಳನ್ನು ರೂಪಿಸಿದರು.

ಸತ್ಯ, ಅಹಿಂಸೆ, ತ್ಯಾಗಗಳಿಂದ ಕೂಡಿರುವ ಚಳವಳಿಗಳಾದರೂ ಗಾಂಧೀಜಿ ಆಫ್ರಿಕಾದಿಂದ ಭಾರತಕ್ಕೆ ಬಂದ ಮೇಲೆ ಪ್ರಾರಂಭವಾದವು. ರಾಜಕೀಯ ಸ್ವಾತಂತ್ರ್ಯಕ್ಕೆ ಮಾತ್ರವಲ್ಲ, ದೇಶದಲ್ಲಿ ಇದ್ದ ಸಮಸ್ಯೆಗಳನ್ನು ಬಿಡಿಸಲು ಚಳವಳಿ ರೂಪಿಸಿದರು. ಇದರಲ್ಲಿ ಅನೇಕರು ತ್ಯಾಗ ಮಾಡಿದರು. ಪ್ರಾಣ ಕೊಟ್ಟರು. ಗುಂಡಿಗೆ ಎದೆ ಕೊಟ್ಟರು, ಆಡಳಿತಗಾರರ ಮನಸ್ಸು ಗೆಲ್ಲಲು, ಅವು ದ್ವೇಷ ಅಸೂಯೆಗಳಿಲ್ಲದ ಚಳವಳಿಗಳಾಗಿದ್ದವು.


ಇವುಗಳ ಪರಿಚಯ ಈಗಿನ ಸಮಾಜದ ಜನರಿಗೆ ಅದರಲ್ಲೂ ಯುವಕರಿಗೆ ಅವಶ್ಯಕವಾಗಿ ಪರಿಚಯವಾಗಿ ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಗಳು ನಡೆದ ರೀತಿಯ ಅರಿವು ಮೂಡಬೇಕಾದ ಅಗತ್ಯತೆಯಿದೆ. ಅದಕ್ಕಾಗಿ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಆದ ಚಳವಳಿಗಳಲ್ಲಿ ಕೆಲವನ್ನು ಪರಿಚಯಿಸುವ ಪುಸ್ತಕವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಪ್ರಕಟಿಸಿತ್ತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಇದೇ ಪುಸ್ತಕವನ್ನು ಪರಿಷ್ಕೃತ ರೂಪದಲ್ಲಿ ಹೊರತಂದಿದೆ. ದೇಶದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗಳು ಎಲ್ಲರಿಗೂ ಪರಿಚಯವಾದರೆ, ಉಪಯುಕ್ತವಾದರೆ ನನಗೆ ತೃಪ್ತಿ.

ಡಾ: ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ.



ಭಾಗ - 1

ಭಾರತದ ಸ್ವಾತಂತ್ರ್ಯ ಚಳವಳಿ ನೆನಪುಗಳು



ಕೆಂಪುಕೋಟೆಯ ಮೇಲೆ ಸ್ವಾಂತ್ರ್ಯ ದಿನದಂದು ಭಾಷಣ ಮಾಡುತ್ತಿರುವ ಜವಹರಲಾಲ್ ನೆಹರು.

1947 ನೇ ಆಗಸ್ಟ್ 15 ರಂದು ಭಾರತ ದೇಶ ಸ್ವಾತಂತ್ರ್ಯ ಪಡೆಯಿತು. ಬಂಧಿಯಾಗಿದ್ದ ಭಾರತ ಮಾತೆಯು ದಾಸ್ಯದಿಂದ ಬಿಡುಗಡೆಯಾದ ದಿನ. 1947 ಆಗಸ್ಟ್ 14 ರ ಮಧ್ಯರಾತ್ರಿ ಜವಾಹರ್ ಲಾಲ್ ನೆಹರೂ ಅವರು ಭಾರತೀಯ ರಾಜ್ಯಾಂಗವನ್ನು ಕುರಿತು **'ಭವಿಷ್ಯದೊಂದಿಗೆ ಅನುಸಂದಾನ'** ಎನ್ನುವ ತಮ್ಮ ಐತಿಹಾಸಿಕ ಭಾಷಣದಲ್ಲಿ "ಮಧ್ಯರಾತ್ರಿಯ ಗಂಟೆ ಬಾರಿಸುತ್ತಲೇ ಜಗತ್ತು ನಿದ್ರಿಸುತ್ತಿರುವ ವೇಳೆಯಲ್ಲಿ ಭಾರತ ಎಚ್ಚೆತ್ತು ಜೀವ ತಳೆಯುತ್ತದೆ. ಸ್ವತಂತ್ರವಾಗುತ್ತದೆ.

ಇತಿಹಾಸದಲ್ಲಿ ಎಂದಾದರೂ ಒಮ್ಮೆ ಬರುವ ಮಹತ್ವದ ಘಳಿಗೆಯೊಂದುಂಟು. ಅಂತಹ ಘಳಿಗೆಯಲ್ಲಿ ಹಳತಿನಿಂದ ಹೊಸತಿಗೆ ನಾವು ಪಾದಾರ್ಪಣೆ ಮಾಡುತ್ತೇವೆ. ಒಂದು ಯುಗ ಮುಕ್ತಾಯವಾಗುತ್ತದೆ. ದೀರ್ಘಕಾಲದಿಂದ ಅದುಮಿ ಹಿಡಿಯಲ್ಪಟ್ಟ ರಾಷ್ಟ್ರವೊಂದರ ಚೇತನ ನುಡಿಯ ತೊಡಗುತ್ತದೆ" ಎಂದು ಹೇಳಿದ ಮಾತು ಇಂದಿಗೂ ಅನುರಣಿಸುತ್ತಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಹೋರಾಟಗಳು ನಡೆದವು. ಮಹಾತ್ಮ ಗಾಂಧೀಜಿಯವರು ಕೊಟ್ಟ ಸ್ವಾತಂತ್ರ್ಯ ಹೋರಾಟದ ಕೊನೆಯ ಕರೆ **"ಬ್ರಿಟಿಷರೇ ಭಾರತ ಬಿಟ್ಟು ತೊಲಗಿ", "ಮಾಡು ಇಲ್ಲವೇ ಮಡಿಯಿರಿ".**

ಈ ಸ್ವಾತಂತ್ರ್ಯ ಕಹಳೆಯ ಕರೆ ದೇಶದಲ್ಲೇ ದೊಡ್ಡ ಆಂದೋಲನಕ್ಕೆ ಕಾರಣವಾಯಿತು. ಸುಂಟರಗಾಳಿ ಬೀಸಿತು. ದೊಡ್ಡ ಸಂಗ್ರಾಮವೇ ನಡೆಯಿತು. ಸ್ವಾತಂತ್ರ್ಯಕ್ಕಾಗಿ ದುಡಿದವರು, ಮಡಿದವರು, ಲಕ್ಷಾಂತರ ಮಂದಿ. ಅವರ ಹೋರಾಟದ ಫಲವೇ ಸ್ವಾತಂತ್ರ್ಯ. ಈ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ದೇಶದ ಪರಿಸ್ಥಿತಿಯ ಒಂದು ಇಣುಕು ನೋಟ ಹಾಕೋಣ.

ಭಾರತ ದೇಶ 18 ನೇ ಶತಮಾನದ ಪ್ರಾರಂಭದಲ್ಲಿ ರಾಜ ಮಹಾರಾಜರ ನವಾಬರ ಒಳಜಗಳದಿಂದ ಛಿದ್ರ ಛಿದ್ರವಾಗಿ ಯುದ್ಧಗಳು ನಡೆಯುತ್ತಲೇ ಇದ್ದವು. ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯವರು ಆ ವೇಳೆಗೆ ಸರಿಯಾಗಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. ಇಲ್ಲಿನ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ದೇಶದ

ಆಡಳಿತವನ್ನು ವ್ಯಾಪಾರಕ್ಕಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾದರು. ಆಡಳಿತಗಾರರಾದರು.

ನಮ್ಮ ಒಳ ಜಗಳದಿಂದ ಈಸ್ಟ್ ಇಂಡಿಯಾ ಕಂಪನಿಗೆ ಲಾಭವಾಯಿತು. ಭಾರತೀಯ ಅರಸರುಗಳನ್ನು ಸುಲಭವಾಗಿ ಗೆದ್ದರು. ಬ್ರಿಟಿಷರು ವ್ಯಾಪಾರಕ್ಕಾಗಿ ಬಂದವರು ಇಲ್ಲೇ ಉಳಿದರು.

ಬ್ರಿಟಿಷರ ರಾಜ್ಯ ವಿಸ್ತರಣಾ ನೀತಿಯನ್ನು ಭಾರತೀಯ ರಾಜರುಗಳು ವಿರೋಧಿಸಿದರು. ಹೈದರಾಲಿ, ಮೈಸೂರಿನ ಹುಲಿ ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ, ನಾನಾ ಸಾಹೇಬ್, ರಾಣಿ ಲಕ್ಷ್ಮೀಬಾಯಿ, ತಾಂತ್ಯಾಟೋಪಿ ಮುಂತಾದವರು ಬ್ರಿಟಿಷರೊಂದಿಗೆ ಹೋರಾಡಿ, ವೀರ ಸ್ವರ್ಗ ಪಡೆದರು. ಭಾರತದ ಕೈಗಾರಿಕೆಗಳು ನಾಶವಾದವು. ಮತ ಭೇದಗಳು ಹೆಚ್ಚಾದವು. ರೈತರ ಮೇಲೆ ಹೇರಿದ ತೆರಿಗೆ, ನೀಲಿ ಬೆಳೆಯ ಮೇಲೆ ನಿಗದಿ, ಹತ್ತಿ ರಫ್ತು, ಬಟ್ಟೆ ಆಮದು, ಐಶ್ವರ್ಯ ದೋಚುವ ದಬ್ಬಾಳಿಕೆಯಿಂದ ಭಾರತ ದಾರಿದ್ರ್ಯದ ಬೀಡಾಯಿತು. ಭಾರತೀಯರು ಅತೃಪ್ತರಾದರು.

1857 ರಲ್ಲಿ ಬ್ರಿಟಿಷರ ವಿರುದ್ಧ ಮಹಾ ಪ್ರತಿರೋಧದ ಸಿಪಾಯಿ ದಂಗೆ ಆಯಿತು. ಇದೇ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಹೋರಾಟಕ್ಕೆ ನಾಂದಿಯಾಯಿತು. ಅನೇಕ ನಾಯಕರನ್ನು ಬ್ರಿಟಿಷರು ಗಲ್ಲಿಗೇರಿಸಿದರು. ಗಡೀಪಾರು ಮಾಡಿದರು. ಭಾರತೀಯರು




ಸಿಪಾಯಿ ದಂಗೆಯಲ್ಲಿ ಮಡಿದ ಸ್ವಾತಂತ್ರ್ಯ ಸೇನಾನಿಗಳು

ಒಗ್ಗಟ್ಟಾಗಿಲ್ಲವಾದ್ದರಿಂದ ಇದರಲ್ಲಿ ಅವರಿಗೆ ಗೆಲುವು ಸಿಗಲಿಲ್ಲ.

ಇದೇ ಸಂದರ್ಭದಲ್ಲಿ ನಮ್ಮ ದೇಶದ ಹಳೇ ಪದ್ಧತಿಗಳು, ನಂಬಿಕೆಗಳು ಭಾರತದ ಗುಲಾಮಗಿರಿಗೆ ಕಾರಣವೆಂದು, ಅನೇಕ ಸಾಮಾಜಿಕ ಸುಧಾರಣೆಗಳನ್ನು ತರಲು ಪ್ರಯತ್ನಿಸಿದ ರಾಜಾರಾಮ್ ಮೋಹನ್ ರಾಯ್‌ರವರು, ಭಾರತೀಯರನ್ನು ಎಚ್ಚರಿಸಿದರು. "ನಮ್ಮ ದೇಶಕ್ಕೆ ಉಕ್ಕಿನಂತಹ ಮನುಷ್ಯರು ಬೇಕು. ಅವರು ನಿರ್ಭೀತರೂ, ಬಲಿಷ್ಠರೂ ಆಗಿರಬೇಕು. ದೌರ್ಬಲ್ಯ ಒಂದು ಪಾಪ" ಎಂಬ ಮಾತುಗಳಿಂದ ವಿವೇಕಾನಂದರು ಭಾರತೀಯರನ್ನು ಎಚ್ಚರಿಸಿದರು, ಚೇತನಗೊಳಿಸಿದರು.

ಮಹದೇವ ಗೋವಿಂದ ರಾನಡೆ, ಸ್ವಾಮಿ ದಯಾನಂದ, ಅನ್ನಿಬೆಸೆಂಟ್, ಈಶ್ವರಚಂದ್ರ ಸಾಗರರು ಸೇರಿದಂತೆ ಇನ್ನಿತರ ಸಮಾಜ ಸುಧಾರಣೆಯ ಅಗ್ರ ನಾಯಕರುಗಳು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಗೆ ಒಂದು ರೀತಿಯ ಮುನ್ನುಡಿಗಳನ್ನು ನೀಡಿದರು.

ದೇಶದ ಹಿರಿಮೆಯನ್ನು ತಿಳಿಸಲು ಒಂದು ರಾಷ್ಟ್ರಧ್ವಜ, ಒಂದು ರಾಷ್ಟ್ರ ಭಾಷೆ, ಒಂದು ರಾಷ್ಟ್ರ ಗೀತೆ ಅಗತ್ಯವೆಂಬುದು ಅರಿವಾಯಿತು. ಆ ವೇಳೆಗೆ ಸರಿಯಾಗಿ ಬಂಗಾಳಿ ಭಾಷೆಯಲ್ಲಿ ಸ್ಫೂರ್ತಿದಾಯಕವಾದ "ಆನಂದ ಮಠ" ಕಾದಂಬರಿಯಲ್ಲಿ ಸ್ವಾತಂತ್ರ್ಯ ಸಮರಗೀತೆಯಾಗಿ "ವಂದೇ ಮಾತರಂ" ಮೊಳಗಿ ಜನರಲ್ಲಿ ದೇಶಭಕ್ತಿ



ಮೂಡುವಂತೆ ಮಾಡಿತು. "ಬಂಕಿಮ ಚಂದ್ರ ಚಟ್ಟೋಪಾಧ್ಯಾಯರ ಈ ಗೀತೆಯು "ಬಂಗಾರ್ ದರ್ಶನ್" ಎಂಬ ಪತ್ರಿಕೆಯಲ್ಲಿ 1876ರಲ್ಲಿ ಪ್ರಕಟವಾಯಿತು. ಇದು ಭರತ ಖಂಡದ ಚೆಲುವನ್ನು, ತಾಯ್ನಾಡಿನ ಪ್ರೇಮವನ್ನು ಅಭಿವ್ಯಕ್ತಿಸುತ್ತದೆ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಜನರು ಈ ಸಮರ ಗೀತೆಯನ್ನು ಹಾಡಿದರು. ಇದು ನಮ್ಮ ಜನರಲ್ಲಿ ದೇಶಭಕ್ತಿ ಮೂಡುವಂತೆ ಮಾಡಿತು. ದೇಶಪ್ರೇಮಿಗಳ ಮೆಚ್ಚಿನ ಮಂತ್ರವಾಯಿತು. 1896 ರಲ್ಲಿ ಕಾಂಗ್ರೇಸ್ ಅಧಿವೇಶನದಲ್ಲಿ ರವೀಂದ್ರನಾಥ ಠಾಗೂರ್‌ರವರು ಹಾಡಿದರು. ಎಲ್ಲರಿಗೂ ರೋಮಾಂಚನ. "ವಂದೇ ಮಾತರಂ" ಶಬ್ಧ ಬ್ರಿಟಿಷರಿಗೆ ಕರ್ಣ ಕಠೋರವಾಯಿತು. 'ವಂದೇ ಮಾತರಂ" ಎಂದರೆ ಅಪರಾಧವಾಯಿತು. ಈ ಗೀತೆಯನ್ನು ಹಾಡಿದುದರಿಂದ ಅನೇಕ ನಾಯಕರು, ಯುವಕರು ಸೆರೆಮನೆಗೆ ಹೋದರು.


ಬ್ರಿಟೀಷ್ ಆಡಳಿತಗಾರರು ಹಾಡನ್ನು ಕೇಳಲಾರದೆ ಹೋರಾಟಗಾರರನ್ನು ಸದೆಬಡಿದರು. ಇವರು ರಾಷ್ಟ್ರ ಪ್ರೇಮಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಹಾಡುತ್ತಾ ತಮ್ಮ ಪ್ರಾಣವನ್ನು ಕೊಟ್ಟರು. ಕೊನೆ ಉಸಿರುವವರೆಗೆ ವಂದೇ ಮಾತಂ ಹಾಡಿದರು.

ಈ ದಬ್ಬಾಳಿಕೆಗೆ ಬಂಗಾಳಿ ಯುವಕರು ರೊಚ್ಚಿಗೆದ್ದರು. ಬ್ರಿಟಿಷರನ್ನು ಕೊಲೆ ಮಾಡಲು ಪ್ರಯತ್ನಿಸಿದರು. ಖುದಿರಮ ಎಂಬ 15 ವರ್ಷದ ಹುಡುಗ ಮತ್ತು

ಕನ್ನಯ್ಯಲಾಲ್ ಎಂಬ ಯುವಕನನ್ನು ಗಲ್ಲಿಗೇರಿಸಿದರು. ಈ ಹುಡುಗರು " ವಂದೇ ಮಾತರಂ" ಎಂದು ಉಚ್ಚರಿಸುತ್ತಲೇ ಗಲ್ಲಿಗೇರಿದರು. ನಾಡಿನ ಜನರಿಗೆ ಇದು ಕೇವಲ ಗೀತೆ ಮಾತ್ರವಲ್ಲ, ಬೆಂಕಿಯ ಜ್ವಾಲೆಯಾಗಿತ್ತು. ಸಮರ್ಪಣ ಮಂತ್ರವಾಗಿತ್ತು.

ಬಂಗಾಳದಲ್ಲಿ 1906 ರಲ್ಲಿ ಬಿಪಿನ್ ಚಂದ್ರಪಾಲ್ "ವಂದೇ ಮಾತರಂ" ಪತ್ರಿಕೆ ಆರಂಭಿಸಿದರು. 1907 ರಲ್ಲಿ ಪತ್ರಿಕೆಯ ಮೇಲೆ ದೇಶದ್ರೋಹ ಅಪರಾಧ ಹೊರಿಸಿ ಬಂಧಿಸಿದರು. 1906 ರಲ್ಲಿ ಪ್ರಥಮ ಕಾಂಗ್ರೆಸ್‌ನಲ್ಲಿ ರೂಪಿಸಿದ ರಾಷ್ಟ್ರಧ್ವಜದ ಮಧ್ಯದಲ್ಲಿ "ವಂದೇ ಮಾತರಂ" ಎಂದು ಬರೆದಿತ್ತು. ತಮಿಳು ನಾಡಿನಲ್ಲಿ ಸುಬ್ರಹ್ಮಣ್ಯ ಭಾರತೀಯರು ತಮಿಳಿನಲ್ಲಿ ರಾಷ್ಟ್ರಗೀತೆಯನ್ನು ರಚಿಸಿ ಜನರನ್ನು ಹುರಿದುಂಬಿಸಿದರು. ಭಾರತೀಯ ಭಾಷಾ ಪತ್ರಿಕೆಗಳಿಂದ ಬ್ರಿಟಿಷರ ದಬ್ಬಾಳಿಕೆಯನ್ನು ಖಂಡಿಸಿದ ಫಲವಾಗಿ ಭಾಷಾ ಪತ್ರಿಕೆಗಳ ಪ್ರಕಟಣೆಯನ್ನು ರದ್ದುಗೊಳಿಸಿದರು. ಸಂಪಾದಕರುಗಳಿಗೆ ತೀವ್ರ ಶಿಕ್ಷೆ, ಸೆರೆಮನೆ ವಾಸ ವಿಧಿಸಿದರು.

ಎ.ಓ. ಹ್ಯೂಮ್‌ರವರು ಜನಗಳಲ್ಲಿ ಅಸಮಾಧಾನ ಹೆಚ್ಚುವುದನ್ನು ತಪ್ಪಿಸಲು ಕುಂದುಕೊರತೆಗಳನ್ನು ಹೇಳಿಕೊಳ್ಳಲು ಅವಕಾಶ ಕೊಡಲು 1885 ರಲ್ಲಿ ನ್ಯಾಷನಲ್ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅವರೇ ಅದರ ಮೊದಲ ಅಧ್ಯಕ್ಷರು. ದಾದಾಬಾಯಿ ನವರೋಜಿ, ಫೆರೋಜ್ ಷಾ ಮೆಹತಾ, ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ, ಬಿಪಿನ್ ಚಂದ್ರಪಾಲ್, ಲಾಲ



ಗಾಂಧೀಜಿ ಕರೆಗೆ ಓಗೊಟ್ಟು ಮುನ್ನಡೆಯುತ್ತಿರುವ ಹೋರಾಟಗಾರರು.

ಲಜಪತರಾಯ್, ಬಾಲಗಂಗಾಧರ್ ತಿಲಕ್‌ರವರು ಕಾಂಗ್ರೆಸ್‌ನ ಈ ರಾಷ್ಟ್ರ ಸಂಗ್ರಾಮದಲ್ಲಿ ಧುಮುಕಿದರು.

ಹಕ್ಕಿಗಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮನೋವೃತ್ತಿಯನ್ನು ಜನರಲ್ಲಿ ಮೂಡಿಸಿದರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಸ್ವಾತಂತ್ರ್ಯ ಆಕಾಂಕ್ಷೆ ಹೆಚ್ಚಿಸಲು "ಕೇಸರಿ" ಪತ್ರಿಕೆಯನ್ನು ಪ್ರಕಟಿಸಿ ಪ್ರಚೋದಕವಾದ ಲೇಖನಗಳನ್ನು ಬರೆದರು. "ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು" ಎಂದು ಸಾರಿದರು.

ಬಂಗಾಳ ವಿಭಜನೆ:

ಬ್ರಿಟಿಷರು ಬಂಗಾಳ ದೇಶವನ್ನೇ ಇಬ್ಭಾಗ ಮಾಡಿದರು. ಹಿಂದು ಮುಸ್ಲಿಂರ ಮಧ್ಯ ಜಗಳ ಹುಟ್ಟಿಸಲು

ಪ್ರಯತ್ನಿಸಿದರು. ಇದರಿಂದ ದೇಶದಲ್ಲಿ ಒಂದು ಕ್ರಾಂತಿ ಉಂಟಾಯಿತು. ಸತ್ಯಾಗ್ರಹಿಗಳು ಎಲ್ಲಾ ಕಡೆ ವಂದೇ ಮಾತರಂ ಹಾಡಿದರು. ವಿದೇಶಿ ವಸ್ತು ಮತ್ತು ಬಟ್ಟೆ ಸುಟ್ಟರು. ಸ್ವದೇಶಿ ವಸ್ತುಗಳ ಉಪಯೋಗ ಪ್ರಾರಂಭವಾಯಿತು. ಸ್ವದೇಶಿ ಶಾಲೆಗಳು ಪ್ರಾರಂಭವಾದವು.

ಬಿಪಿನ್ ಚಂದ್ರಪಾಲ್, ಅರವಿಂದ್ ಘೋಷ್, ಲಾಲ ಲಜಪತ್ ರಾಯ್, ಭಗತ್‌ಸಿಂಗ್, ಸಾವರ್ಕರ್ ಮುಂತಾದ ಅನೇಕ ನಾಯಕರುಗಳು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಬಳಿ ಬೇಡುವುದು ಸರಿಯಲ್ಲವೆಂದು ಹಿಂಸಾ ಚಳವಳಿಯ ಕ್ರಾಂತಿ ಮಾರ್ಗ ಅನುಸರಿಸಿದರು. ಇದರಲ್ಲಿ ಜನಸಾಮಾನ್ಯರು ಭಾಗವಹಿಸಲು ಕಷ್ಟವಾಯಿತು. ಜನರಿಂದ ಹೆಚ್ಚು ಬೆಂಬಲ ಸಿಗಲಿಲ್ಲ. ಹಿಂಸಾತ್ಮಕ ಕ್ರಾಂತಿಕಾರಿ ಚಳವಳಿಗೆ ಹೆಚ್ಚು ಜನ ಆಕರ್ಷಿತರಾಗಲಿಲ್ಲ. ಈ ವೇಳೆಗೆ ಸರಿಯಾಗಿ ದಕ್ಷಿಣ ಆಫ್ರಿಕಾದಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದ ಮೋಹನದಾಸ ಕರಂಚಂದ್ ಗಾಂಧಿಯವರು ಭಾರತಕ್ಕೆ ಹಿಂದಿರುಗಿ ತಮ್ಮ ಅಹಿಂಸಾತ್ಮಕ ಚಳವಳಿಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆಯಾಗಿ ನೀಡಿದರು.

ಗಾಂಧೀಜಿಯವರು ಮೊದಲು ರಾಜಕೀಯಕ್ಕೆ ಪ್ರವೇಶಿಸದೆ ಭಾರತೀಯರ ಕಷ್ಟ ಕಾರ್ಪಣ್ಯಗಳನ್ನು ತನ್ನದೇ ಆದ ಸತ್ಯಾಗ್ರಹ ಮಾರ್ಗದಲ್ಲಿ " ನಾವು ಯಾರಿಗೂ ಅಪಾಯ ಉಂಟು ಮಾಡಬಾರದು. ಅನ್ಯಾಯದ ವಿರುದ್ಧ ಹೋರಾಡಿ, ಶತ್ರುಗಳನ್ನು ಪ್ರೀತಿಸಿ, ಯಾವತ್ತೂ ನಿಜವನ್ನೇ



ತಮ್ಮ ಅನುಯಾಯಿಗಳೊಂದಿಗೆ ಸಾಗುತ್ತಿರುವ ಗಾಂಧೀಜಿ.

ನುಡಿಯಿರಿ. ಭೀತಿ ತ್ಯಜಿಸಿರಿ. ಒಗ್ಗಟ್ಟಾಗಿರಿ - ಎಂಬ ಸಂದೇಶವನ್ನು ಇಡೀ ಭಾರತಕ್ಕೆ ನೀಡಿದರು. ಬ್ರಿಟಿಷ್ ಪ್ರಭುತ್ವದ ವಿರುದ್ಧ ಶಾಂತಿಯುತವಾದ ಅಸಹಕಾರ ಚಳವಳಿಯೇ ಉತ್ತಮಮಾರ್ಗ ಎಂಬುದೇ ಗಾಂಧೀಜಿ ಸಂದೇಶ.

ಜಲಿಯನ್ ವಾಲಾಬಾಗ್ :

1919 ರಲ್ಲಿ ದೇಶಾದ್ಯಂತ ಹರತಾಳ ಆಚರಣೆ ನಡೆಯಿತು. ಅಮೃತಸರದಲ್ಲಿ ಜನಪ್ರಿಯರಾಗಿದ್ದ ಡಾ: ಕಿಟ್ಲು ಮತ್ತು ಸತ್ಯಪಾಲ್ ಅವರ ಬಂಧನ ಮತ್ತು ಗಡೀಪಾರು ಆಯಿತು. ಇದನ್ನು ಪ್ರತಿಭಟಿಸಲು

ಸಾರ್ವಜನಿಕರು "ಜಲಿಯನ್ ವಾಲಾಬಾಗ್" ಎಂಬ ಮೈದಾನದಲ್ಲಿ ಪ್ರತಿಭಟನಾ ಸಭೆ ಸೇರಿದ್ದರು. ಬ್ರಿಟಿಷ್ ಸೈನಿಕರು ಗುಂಡು ಹಾರಿಸಿ ಜನ ತಪ್ಪಿಸಿಕೊಂಡು ಹೋಗಲು ಅವಕಾಶ ಕೊಡದೆ ಅಮಾನುಷ ರೀತಿಯಲ್ಲಿ ಕೊಲೆ ಮಾಡಿದರು. "ಜಲಿಯನ್ ವಾಲಾಬಾಗ್" ಹತ್ಯಾಕಾಂಡ, ನಮ್ಮ ಸ್ವಾತಂತ್ರ್ಯ ಸಮರದ ಮುಖ್ಯ ಘಟನೆ.

ಗಾಂಧೀಜಿಯವರು ಸತ್ಯಾಗ್ರಹ, ಅಹಿಂಸಾತ್ಮಕ ಅಸಹಕಾರ ಚಳವಳಿಯಿಂದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ತಿರುವನ್ನೇ ಕೊಟ್ಟರು. " ನಾವು ನ್ಯಾಯಾಲಯಗಳು, ಕಚೇರಿಗಳು, ಶಾಲೆಗಳಿಗೆ ಹೋಗದೆ ಅವರೊಂದಿಗೆ ಸಹಕರಿಸದಿದ್ದರೆ, ಅವರ ಸರಕುಗಳನ್ನು ಕೊಳ್ಳದಿದ್ದರೆ ಸ್ವಾವಲಂಬನಾ ಬುದ್ಧಿ ಹೆಚ್ಚಿಸಿಕೊಂಡರೆ, ಒಂದೇ ವರ್ಷದಲ್ಲಿ ಸ್ವರಾಜ್ಯ ಸಿಕ್ಕೇ ಸಿಗುತ್ತದೆ" ಎಂದರು



'ಜಲಿಯನ್ ವಾಲಾಬಾಗ್'ನಲ್ಲಿ ಹೋರಾಟಗಾರರ ಮೇಲೆ ಗುಂಡು ಹಾರಿಸುತ್ತಿರುವ ಬ್ರಿಟಿಷ್ ಸೈನಿಕರು.

ಗಾಂಧೀಜಿ. ದೇಶದ ಸಮಸ್ಯೆಗಳನ್ನು ಬಿಡಿಸಲು ರಚನಾತ್ಮಕ ಕಾರ್ಯಗಳನ್ನು ರೂಪಿಸಿ ಸ್ವತಂತ್ರವಾಗಿ ಜೀವಿಸುವ ಮಾರ್ಗ ನೀಡಿ ಸಾಮಾನ್ಯರೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು.

ಜನಸಾಮಾನ್ಯರೂ ಸಾಮೂಹಿಕವಾಗಿ ಆಚರಿಸುವ ಚಳವಳಿಯಾದ್ದರಿಂದ ಇದು ದೇಶದ ಎಲ್ಲಾ ಹಳ್ಳಿ ಹಳ್ಳಿಗಳಿಗೂ ಹರಡಿತು. ಜನತೆ ಸ್ವಾಗತಿಸಿದರು. ಹೆಮ್ಮೆಯಿಂದ ಭಾಗವಹಿಸಿದರು. ತ್ಯಾಗಕ್ಕೆ ಸಿದ್ಧರಾದರು. ಕಂದಾಯ ಕೊಡುವುದನ್ನು ಬಹಿಷ್ಕರಿಸುವ ಚಳವಳಿಯಿಂದ ರೈತರಿಗೆ ಅಸಹಕಾರ ಚಳವಳಿಯಲ್ಲಿ ಅಪಾರ ನಂಬಿಕೆ ಬಂದಿತು. ಭಾಗವಹಿಸಲು ಪ್ರಾರಂಭಿಸಿದರು. ಜನತೆಯಿಂದ ದೊರೆತ ಬೆಂಬಲದಿಂದ ಗಾಂಧಿಯವರು ಅಂಹಿಸೆಯ ಮಂತ್ರವಾದ ಸತ್ಯಾಗ್ರಹವನ್ನು ಪ್ರಾರಂಭಿಸಿದರು.

ಆಂಗ್ಲರು ಅಸಹಕಾರ ಚಳವಳಿಗೆ ಮಣಿಯಲಿಲ್ಲ. ಹೀಗಾಗಿ, ಗಾಂಧೀಜಿಯವರು 1942 ರ ಆಗಸ್ಟ್ 9 ರಂದು "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಘೋಷಣೆಯನ್ನು ಮೊಳಗಿಸಿದರು. ಇದೇ "ಕ್ವಿಟ್ ಇಂಡಿಯಾ ಚಳವಳಿ", 'ಮಾಡು ಇಲ್ಲವೆ ಮಡಿ' ಎಂಬ ಸಂದೇಶ ದೇಶದಲ್ಲೆಲ್ಲಾ ಹರಡಿ ಜನ ಬೀದಿಗಿಳಿದು ಹೋರಾಡಲು ಆರಂಭಿಸಿದರು. ದೇಶಾದ್ಯಂತ ಎಲ್ಲಾ ನಾಯಕರ ಬಂಧನ ಆಯಿತು. ಕ್ರಾಂತಿಯ ವಾತಾವರಣ ಹುಟ್ಟಿತು. ನಾಯಕರೆಲ್ಲಾ ಜೈಲಿನಲ್ಲಿ ಇದ್ದುದರಿಂದ ಯುವಕರು ಮತ್ತು ವಿದ್ಯಾರ್ಥಿಗಳೇ ಚಳವಳಿಯ

ಮುಂದಾಳುಗಳಾಗಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದರು.

ಶಾಲಾ ಕಾಲೇಜುಗಳನ್ನು ಮುಚ್ಚಬೇಕಾಯಿತು. ಜನರು ಕಾನೂನು ಉಲ್ಲಂಘಿಸಿ ಜೈಲಿಗೆ ಹೋದರು. ಧ್ವಜ ಹಾರಿಸುವುದು, ಸ್ವಾತಂತ್ರ್ಯ ಗೀತೆಗಳನ್ನು ಹಾಡುವುದು, ಹರತಾಳ ನಡೆಸುವುದು ಮಾಮೂಲಾಯಿತು. ಗೀತೆಗಳನ್ನು ಹಾಡುತ್ತಾ ಮೆರವಣಿಗೆ ಹೊರಟರೆ ಲಾಟಿ ಛಾರ್ಜು, ಗ್ಯಾಸ್ ಸಿಡಿತ, ಕೊನೆಗೆ ಗುಂಡಿನ ಏಟು, ಇದು ನಿತ್ಯದ ಕಾರ್ಯಕ್ರಮ. ಒಂದು ಊರಿನಲ್ಲಿ ಅಲ್ಲ ದೇಶಾದ್ಯಂತ ಜೈಲುಗಳು ಭರ್ತಿಯಾದವು. ಕೆಲವು ಕಡೆ ವಿಧ್ವಂಸಕ ಕೃತ್ಯಗಳೂ ನಡೆದವು. ಅನೇಕ ಕಡೆ ಅಂಚೆ ಕಚೇರಿ,



ಮಹಿಳಾ ಸಮಾವೇಶದಲ್ಲಿ ಮಾತನಾಡುತ್ತಿರುವ ಗಾಂಧೀಜಿ.

ಸರ್ಕಾರಿ ಕಚೇರಿಗಳಿಗೆ ಬೆಂಕಿ ಇಟ್ಟರು. ನಿತ್ಯವು ಒಂದಲ್ಲ ಒಂದು ಕಡೆ ಗೋಲಿಬಾರ್, ಒಬ್ಬರೋ ಇಬ್ಬರೋ ಸಾಯುತ್ತಿದ್ದರು. ಆದರೂ ಜನರಲ್ಲಿ ಛಲ ಹೋಗಲಿಲ್ಲ. ಪ್ರಾಣ ಕೊಡಲು ಸಿದ್ಧರಾಗಿದ್ದರು. ಎಷ್ಟೋ ಜನ ಗುಪ್ತವಾಗಿ ಕಾರ್ಯಾಚರಣೆ ನಡೆಸಿ ಯಾರಿಗೂ ತಿಳಿಯದಂತೆ ಪೊಲೀಸರ ಗುಂಡಿನ ಏಟಿಗೆ ಬಲಿಯಾಗಿದ್ದಾರೆ.

ಸುಭಾಷ್‌ಚಂದ್ರ ಬೋಸರು ಭಾರತದಿಂದ ಜರ್ಮನಿಗೆ ಹೋಗಿ, ಅಲ್ಲಿಂದ ಜಪಾನ್‌ಗೆ ಹೋಗಿ ಅಲ್ಲಿ "ಅಜಾದ್ ಹಿಂದ್ ಫೌಜ್' ಸೈನ್ಯ ಕಟ್ಟಿ ಭಾರತದ ಸ್ವಾತಂತ್ರ್ಯಕ್ಕಾಗಿ ನಾಡಿನ ಹೊರಗಡೆಯಿಂದ ಬ್ರಿಟಿಷರ ಮೇಲೆ ಯುದ್ಧ ಘೋಷಿಸಿದರು.

ಆಡಳಿತಗಾರರಿಗೆ ಹೊರಗಡೆ ಮಹಾಯುದ್ಧ, ಒಳಗಡೆ ಚಳವಳಿ. ಲಕ್ಷಾಂತರ ಜನ ಜೈಲಿಗೆ ಹೋದರು. ಲಾಟಿ ಏಟು ಗುಂಡಿನ ಏಟು ತಿಂದರು. ರೈಲು ಕಂಬಿ ಕಿತ್ತರು. ಸೇತುವೆಗಳಿಗೆ ಬಾಂಬು ಇಟ್ಟು ನಾಶಪಡಿಸಿದರು. ಸರ್ಕಾರ ನಡೆಸುವುದೇ ಕಷ್ಟವಾಯಿತು.

ಯುದ್ಧ ಮುಗಿದ ಮೇಲೆ ಬ್ರಿಟನ್‌ನಲ್ಲಿ ಕನ್ಸರೆಟಿವ್ ಪಕ್ಷ ಹೋಗಿ, ಲೇಬರ್ ಪಕ್ಷ ಆಡಳಿತಕ್ಕೆ ಬಂದ ಮೇಲೆ, ಭಾರತೀಯರು ಶಾಶ್ವತ ಶತ್ರುಗಳಾಗಬಾರದೆಂದು, ಮಾತು ಕತೆ ನಡೆಸಿ, ಭಾರತಕ್ಕೆ ಸ್ವಾತಂತ್ರ್ಯ ಆಡಳಿತ ಕೊಡಲು ತೀರ್ಮಾನಿಸಿದಾಗ, ಜಿನ್ನಾರವರ ಹಟದಿಂದ ದೇಶ ಇಬ್ಭಾಗವಾಯಿತು.



ಭಾರತ – ಪಾಕಿಸ್ತಾನ ವಿಭಜನೆಯ ಸಭೆ.

ಬ್ರಿಟಿಷರ ಆಡಳಿತ ಕೊನೆಯಾಯಿತು. ಭಾರತೀಯರು ಕಂಡ ಕನಸು ನನಸಾಯಿತು. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಇದರೊಂದಿಗೆ ಸ್ವಾತಂತ್ರ್ಯ ಸಂಗ್ರಾಮವು ಮುಕ್ತಾಯವಾಯಿತು.

ಭಾರತದಲ್ಲಿ 1947 ನೇ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನ ಆಚರಿಸುವಾಗ ಗಾಂಧೀಜಿಯವರು "ನೌಖಾಲಿ"ಯಲ್ಲಿ ಹಿಂದು ಮುಸಲ್ಮಾನರ ಏಕತೆಗೆ ಕಾಲು ನಡಿಗೆಯಲ್ಲಿ ಸುತ್ತಾಡುತ್ತಿದ್ದರು. 1948 ರ ಜನವರಿ 30 ಗಾಂಧೀಜಿಯವರು ದುಷ್ಕರ್ಮಿಗಳಿಂದ ಹತ್ಯೆಗೀಡಾಗಿ ಹುತಾತ್ಮರಾದರು.

ಭಾಗ – 2

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಕುರುಹುಗಳು

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಮೊದಲ ಕುರುಹು ಮೈಸೂರು ಸಂಸ್ಥಾನದಲ್ಲಿದೆ. ಬ್ರಿಟಿಷರ ವಿರುದ್ಧ ಕರ್ನಾಟಕದಲ್ಲಿ ಮೊಟ್ಟ ಮೊದಲನೆಯದಾಗಿ ಹೈದರಾಲಿ ಮತ್ತು ಮೈಸೂರಿನ ಹುಲಿ ಎಂದೇ ಖ್ಯಾತರಾಗಿರುವ ಟಿಪ್ಪು ಸುಲ್ತಾನ್ ರವರು ಹೋರಾಟ ಆರಂಭಿಸುತ್ತಾರೆ. ನಂತರದಲ್ಲಿ ಬಳ್ಳಾರಿ, ರಾಯದುರ್ಗದ ಪಾಳೆಯಗಾರರು, ಆನೆಗೊಂದಿಯ ಪಾಳೇಗಾರರು, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಮುಧೋಳ ಸಂಸ್ಥಾನದ ಬೇಡರು, ಬಾಬಾಜಿ, ಮುಂತಾದವರು ಬ್ರಿಟಿಷರ ವಿರುದ್ಧ ಹೋರಾಡಿದರು.

ಗಾಂಧೀಜಿಯವರು ಕರ್ನಾಟಕಕ್ಕೆ ಅನೇಕ ಸಲ ಭೇಟಿ ನೀಡಿ ರಾಜ್ಯದಲ್ಲಿ ಪ್ರವಾಸ ಮಾಡಿದ್ದರಿಂದ, ಇಲ್ಲಿನ ಹೋರಾಟಕ್ಕೆ ಒಂದು ಹೊಸ ವಾತಾವರಣವನ್ನು ಕಲ್ಪಿಸಿತು. ಕಾನೂನು ಭಂಗ ಚಳವಳಿ, ಉಪ್ಪಿನ ಸತ್ಯಾಗ್ರಹ, ಅರಣ್ಯ ಚಳವಳಿ, ಭೂಕಂದಾಯ ನಿರಾಕರಣೆಗಳು ಕರ್ನಾಟಕದಲ್ಲಿ ಬಲವಾಗಿ ನಡೆದವು.

ಸಂಸ್ಥಾನ ಪ್ರದೇಶಗಳಲ್ಲಿ ಚಳವಳಿ ನಡೆಸಲು, ಅನುಮತಿ ಇಲ್ಲದಿದ್ದರೂ ಸಂಘಟನೆಯು ಉದ್ದೇಶದಿಂದ ಖಾದಿ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಿಂದ

ಕರ್ನಾಟಕದಾದ್ಯಂತ, ಹಳ್ಳಿಹಳ್ಳಿಗಳಲ್ಲೂ ಸ್ವಾತಂತ್ರ್ಯ ಚಳವಳಿಯ ವಾತಾವರಣ ಉಂಟಾಗಿತ್ತು.

ಶಿವಪುರ ಧ್ವಜ ಸತ್ಯಾಗ್ರಹ, ವಿದುರಾಶ್ವತ್ಥದಲ್ಲಿ ನಡೆದ ಗೋಲಿಬಾರು ಮತ್ತು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಮಹಾ ಅಧಿವೇಶನ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಪೂರ್ವ ಜಾಗೃತಿ ಉಂಟು ಮಾಡಿತು.

1920 ರಲ್ಲಿ ಗಾಂಧೀಜಿಯ ದಂಡಿಯಾತ್ರೆಯಲ್ಲಿ ಗಾಂಧೀಜಿ ಜೊತೆಗೆ ಹೋದ ಏಕೈಕ ಕರ್ನಾಟಕ ಪುತ್ರ "ಮೈಲಾರ ಮಹಾದೇವ". 1942 ರ ಚಳವಳಿಯಲ್ಲಿ ಸುಮಾರು 8 ತಿಂಗಳ ಕಾಲ ಬ್ರಿಟಿಷ್ ಆಡಳಿತಗಾರರಿಗೆ



ನೌಖಾಲಿಯಲ್ಲಿ ಜನರ ಅಹವಾಲು ಆಲಿಸುತ್ತಿರುವ ಗಾಂಧೀಜಿ

ಕಾಡಿ ಸಿಂಹಸ್ವಪ್ನವಾಗಿದ್ದ. 1943 ರಲ್ಲಿ ಪೊಲೀಸರ ಗುಂಡಿಗೆ ಬಲಿಯಾದ. ಗಾಂಧೀಜಿಗೆ ಸುದ್ದಿ ತಿಳಿದಾಗ "ಮಹಾದೇವ ನನ್ನ ಶಿಷ್ಯ ಮಾಡಿ ಮಡಿದ ವೀರ ಸತ್ಯಾಗ್ರಹಿ" ಎಂದರು.

ಚಳವಳಿ ಉಗ್ರವಾಗಿದ್ದ ಬೆಳಗಾವಿ ಜಿಲ್ಲೆಯ ಗಣ್ಯ ಹೋರಾಟಗಾರ ರಾಮರಾವ್ ಬಿದಿರಿಯವರ ನಾಯಕತ್ವದಲ್ಲಿ 17 ಸಂಗ್ರಾಮ ಕೇಂದ್ರಗಳು ಸ್ಥಾಪಿತವಾಗಿದ್ದವು. ಇವರೆಲ್ಲರೂ ಚಳವಳಿಯನ್ನು ಯಶಸ್ವಿಯಾಗಿ ನಡೆಸಲು ತೀರ್ಮಾನಿಸಿ ಒಗ್ಗಟ್ಟಿನಿಂದ ಹೋರಾಟ ನಡೆಸಿದರು.

ರಾಜ್ಯದಲ್ಲಿ ಸ್ವಾತಂತ್ರ್ಯ ಚಳವಳಿ ನಾನಾ ರೂಪ ಪಡೆದಿತ್ತು. ರೈಲಿನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವುದು ಒಂದು ಚಳವಳಿ ಆಯಿತು. ಸಭೆ ಸೇರುತ್ತದೆ ಎಂದು ಸುಳ್ಳು ಪತ್ರ ಪ್ರಕಟಿಸಿ, ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದರು. ಅದೇ ಒಂದು ತಮಾಷೆ ಆಯಿತು.

ಬೆಳಗಾವಿಯ ಗಂಗಾಧರರಾವ್ ದೇಶಪಾಂಡೆ ಎಂಬ ತರುಣ ದೇಶಪ್ರೇಮಿ ಗಾಂಧೀಜಿಯವರ ಜೊತೆ ಸೇರಿ ಕೆಲಸ ಮಾಡಿ "ಕರ್ನಾಟಕದ ಸಿಂಹ" ಅನ್ನಿಸಿಕೊಂಡಿದ್ದ. ಹಾಸನ, ಶ್ರವಣಬೆಳಗೊಳ, ಮೈಸೂರು, ತುಮಕೂರು, ಶಿಕಾರಿಪುರ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಮುಂತಾದ ಎಲ್ಲಾ ಊರು, ಪ್ರದೇಶಗಳಲ್ಲೂ ಚಳವಳಿ ನಡೆಯುತ್ತಲೇ ಇತ್ತು.

ರಂಗನಾಥ ದಿವಾಕರ, ಸರ್ದಾರ್ ವೆಂಕಟರಾಮಯ್ಯ ಮುಂತಾದವರು ಭೂಗತರಾಗಿ ಚಳವಳಿ ಮುಂದುವರಿಸಲು ಊರು ಊರು ತಿರುಗಿ ಉತ್ತೇಜಿಸಿದ್ದರು. ಚಳವಳಿ ಉಗ್ರವಾಗಿ 7000 ಜನ ಜೈಲಿನಲ್ಲಿ ಇದ್ದರು. ಕೊಡಗು, ಹೈದರಾಬಾದ್ - ಕರ್ನಾಟಕದವರೂ ಚಳವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋಗಿದ್ದರು.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಕಂದಾಯ ವಸೂಲಿ ವಿರುದ್ಧ ಪ್ರತಿಭಟನೆ ನಡೆಸಿ ಗ್ರಾಮವನ್ನು ಸ್ವತಂತ್ರ ಹಳ್ಳಿ ಎಂಬುದಾಗಿ ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು



ಶಿವಪುರದ ಸತ್ಯಾಗ್ರಹ ಸೌಧ

ಗ್ರಾಮ ಆಡಳಿತ ನಡೆಸಿದರು. ನಿರಪರಾಧಿಗಳ ಮೇಲೆ ಲಾಠಿ ಪ್ರಹಾರ ನಡೆಯಿತು. ರೊಚ್ಚಿಗೆದ್ದ ಜನರ ಏಟಿನಿಂದ ಅಮಲ್ದಾರ ಮತ್ತೆ ಪೊಲೀಸ್ ಅಧಿಕಾರಿ ಸತ್ತರು. ಇದರಿಂದ ಆ ಹಳ್ಳಿಯವರು ಪೊಲೀಸರ ದೌರ್ಜನ್ಯಕ್ಕೆ ಒಳಗಾದರು. ಬ್ರಿಟಿಷ್ ಆಡಳಿತಗಾರರು 5 ಮಂದಿಯನ್ನು ಗಲ್ಲಿಗೇರಿಸಿ ಸೇಡು ತೀರಿಸಿಕೊಂಡರು.

ಚಳವಳಿ ಹೊರಗಡೆ ಒಂದು ರೀತಿಯಾಗಿ ನಡೆಯಿತು. ವಿದ್ಯಾರ್ಥಿಗಳು, ಯುವ ಸಮುದಾಯ, ಸತ್ಯಾಗ್ರಹಿಗಳು ಸಾವಿರ ಸಂಖ್ಯೆಯಲ್ಲಿ ಬೀದಿಗಿಳಿದು ಹೋರಾಟ ನಡೆಸಿದರು. ಅನೇಕರು ಭೂಗತರಾಗಿ ಚಳವಳಿಗೆ ಜೀವ ತುಂಬಲು, ಭೂಗತ ಪತ್ರಿಕೆಗಳನ್ನು ಪ್ರಕಟಿಸಲು ಪ್ರಾರಂಭಿಸಿದರು. ಕೈಯಿಂದ ಒತ್ತಿ ಕಲ್ಲಚ್ಚು ಮಾಡಲಾಗುತ್ತಿತ್ತು. ಯಂತ್ರಗಳಿರಲಿಲ್ಲ. ಬೆಂಗಳೂರಿನ ಬಸವನಗುಡಿ ಕಡೆಯಿಂದ ಡಾ: ನರಸಿಂಹಯ್ಯನವರು, ಮಲ್ಲೇಶ್ವರದ ಕಡೆಯಿಂದ ಹೊ. ಶ್ರೀನಿವಾಸಯ್ಯ ಪತ್ರಿಕೆಗಳನ್ನು ಬೆರಳಚ್ಚು ಮಾಡಿ ಕಳ್ಳತನದಲ್ಲಿ ಮನೆಮನೆಗೆ ಹಂಚುತ್ತಿದ್ದರು. ಕಂಬದ ಮೇಲೆ ಅಂಟಿಸುತ್ತಿದ್ದರು. On Govt. of India Service, On Mysore Govt. Service, ರಬ್ಬರ್ ಸ್ಟಾಂಪ್‌ನ್ನು ತಂದು ಸರ್ಕಾರದ ಲಕೋಟೆಯ ತರಹವೇ ಮಾಡಿ, ಅಂಚೆ ಮೂಲಕ ಸರ್ಕಾರಿ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿತ್ತು. ಪತ್ರಿಕೆ ಮನೆಯಲ್ಲಿ ಸಿಕ್ಕಿದರೆ 3 ವರ್ಷ ಜೈಲುವಾಸ ಅನುಭವಿಸಬೇಕಾಗಿತ್ತು. ಅನೇಕ ಮನೆಗಳನ್ನು ಇದಕ್ಕಾಗಿ ಶೋಧನೆ ಮಾಡಿದರೂ ಏನು ಸಿಕ್ಕದಿದ್ದರೂ ಅನುಮಾನದ



ಮೇಲೆ ಜೈಲಿಗೆ ಹಾಕಿದರು. ಪತ್ರಿಕೆಗಳ ಹೆಸರು "ಅಜಾದ್", "ಕ್ರಾಂತಿ", 'ಲಿಬರ್ಟಿ", "ಜ್ವಾಲಾಮುಖಿ", "ಪ್ರಜಾಶಕ್ತಿ", "ಇಂಕಿಲಾಬ್", "ಮೈಸೂರು ಗೆಜೆಟ್", "ಆಹುತಿ" ಹೀಗೆ ಅನೇಕ ಹೆಸರುಗಳು. ಈ ಪತ್ರಿಕೆಗಳಲ್ಲಿ ಚಳವಳಿಯ ಸುದ್ದಿ ಜೊತೆಗೆ ಸಂದೇಶಗಳನ್ನು ಕಳುಹಿಸಿ ಕೊಡಲಾಗುತ್ತಿತ್ತು.

ಒಂದು ಗುಪ್ತ ರೇಡಿಯೋ ಸ್ಟೇಷನ್ ಸಹ ಸ್ಥಾಪಿಸಿ, ಸಂಗ್ರಾಮ ಸುದ್ದಿ ಗೀತೆಗಳನ್ನು ಹಾಡಿ, ಚಳವಳಿ ಮುಂದುವರಿಸಲು ಉತ್ತೇಜಿಸಲಾಯಿತು. ಹೀಗೆ, ರಾಜ್ಯದಲ್ಲಿ ನಾನಾ ರೀತಿಯಲ್ಲಿ ಚಳವಳಿಗಳು ನಡೆದವು. ಅಂತಿಮವಾಗಿ 1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಒಟ್ಟಿನಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆ ಅಪಾರವಾಗಿದೆ

ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ



ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
ದೂರವಾಣಿ: 080–2202 8001/2 | ಫ್ಯಾಕ್ಸ್ : 080–2286 3794
www.karnatakavarthe.org

ಕರ್ನಾಟಕ ವಾರ್ತೆ